ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯು ನಮ್ಮ ರಾಜ್ಯದಲ್ಲಿ ಬಹಳ ಇಂಪಾರ್ಟೆಂಟ್ ಬಿಸಿನೆಸ್ ಸೆಂಟರ್. ಅಲ್ಲಿ ಸಾಧಾರಣ 11 ಅಸೋಸಿಯೇಷನ್ಸ್ ಇವೆ. ನನಗೂ ಒಂದು ಮನವಿ ಕಳುಹಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಮನವಿ ಕೊಟ್ಟಿದ್ದಾರೆ. ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ನಡೆಯುವ ಅತ್ಯಾಚಾರದ ಬಗ್ಗೆ, ಹೆರಾಸ್ಮೆಂಟ್ ಬಗ್ಗೆ ಅಲ್ಲಿರುವ ನಂಜನಗೌಡ ಎಂಬ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ಈ ಅಧಿಕಾರಿಯ ಸಮಸ್ಯೆ ಇಂಡಿವಿಜಿಯಲ್ ಆಗಿದ್ದರೆ ನಾನು ಇದಕ್ಕೆ ಹೆಚ್ಚು ಒತ್ತು ಕೊಡುತ್ತಿರಲಿಲ್ಲ. ಆದರೆ ಈ ಅಧಿಕಾರಿ, ಕ್ಯಾಷ್ ರೆವಿನ್ಯೂ ಕಲೆಕ್ಷನ್‌ನಲ್ಲಿ ಕಾಯಿದೆ ಬದ್ಧವಾಗಿ ಬೇಕಾದ್ದು ಕೆಲಸ ಮಾಡಲಿ. ಆದರೆ ಮನೆಗೆ ಹೋಗುವುದು, ಜನರಿಗೆ ಬೈಯುವುದು ಇದೆ. ಈತನ ಮೇಲೆ ಪೋಲೀಸ್ ಕಂಪ್ಲೇಂಟ್ ಸೂಡ ಆಗಿದೆ. ಇದು ಮುಖ್ಯಮಂತ್ರಿಗಳ ಗಮನಕ್ಕೂ ಬಂದಿದೆ. ನಿನ್ನೆ ಎಂಟೈರ್ ಹುಬ್ಬಳ್ಳಿ ಷಟರ್ ಡೌನ್ ಆಗಿತ್ತು. ಹುಬ್ಬಳ್ಳಿಯಲ್ಲಿ ಮಾರ್ಕೆಟ್ ನಡೆಯುತ್ತಿಲ್ಲ ಇಂತಹ ಪರಿಸ್ಥಿತಿಯಲ್ಲಿ ಒಳ್ಳೆಯ ಅಧಿಕಾರಿ ಇದ್ದರೆ ಅವರಿಗೆ ಸರ್ಟಿಫಿಕೇಟ್ ಕೊಡಿರಿ ಅವರಿಗೆ ಪ್ರಶಂಸೆ ಮಾಡಿ ಆದರೆ ಇಂತಹ ಬೇಜವಾಬ್ದಾರಿ ಅಧಿಕಾರಿಯಿಂದ ಹುಬ್ಬಳ್ಳಿಯಲ್ಲಿ ಏನು ಟ್ರೇಡ್ ಬಂದ್ ಆಗಿದೆ ಅದರ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತೇನೆ. ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೆ. ಆದರೆ ಅದರ ಬಗ್ಗೆ ಯಾವ ಕ್ರಮವನ್ನೂ ಸರ್ಕಾರ ತೆಗೆದುಕೊಂಡಿಲ್ಲ. ಸರ್ಕಾರ, ನಾವು ಒಳ್ಳೆಯ ಆಡಳಿತ ಕೊಡುತ್ತೇವೆ ಮತ್ತು ಕ್ಲೀನ್ ಗೌರ್ನಮೆಂಟ್ ಕೊಡುತ್ತೇವೆ ಎಂದು ಹೇಳುವವರು ಮನೆ ಹೊಕ್ಕಿ ಏನು ಸಾಮಾನ್ಯ ಜನರ ಹೆರಾಸ್ಮೆಂಟ್ ಈ ಅಧಿಕಾರಿಯಿಂದ ನಡೆದಿದೆ, ಅದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಅದರ ಬಗ್ಗೆ ವಿವರಗಳನ್ನು ತರಿಸಿ ಈ ದಿವಸವೇ ಹೇಳಿಕೆಗಳನ್ನು ಕೊಡಿಸುತ್ತೇನೆ.

(2) ಸರ್ಕಾರದ ಹಣಕಾಸಿನ ಪರಿಸ್ಥಿತಿಯ ಬಗ್ಗೆ

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):- ತಮ್ಮ ಅನುಮತಿಯನ್ನು ಕೋರಿ ನಾನು ಒಂದು ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರುತ್ತಾರೆಂದು ನಾನು ಅಂದುಕೊಂಡಿದ್ದೆ. ನಾನು ಇರುತ್ತೇನೆ ಎನ್ನತಕ್ಕಂಥ ಆಶ್ವಾಸನೆಯನ್ನು ಅವರು ಕೊಟ್ಟಿದ್ದರು. ಇವತ್ತೆ ಸದನದ ಕೊನೆಯ ದಿನ, ನಾವು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುವಂಥಾದ್ದು ಇರುತ್ತದೆ. ನಾಳೆಯಿಂದ ಫೆಬ್ರವರಿ 12ನೇ ತಾರೀಖಿನವರೆಗೂ ಇಲ್ಲಿ ಸೇರುವುದಿಲ್ಲ. ವಿಶೇಷವಾಗಿ ರಾಜ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ ಈ ಸರ್ಕಾರ ದಿವಾಳಿ ಆಗಿದೆ ಎನ್ನತಕ್ಕ ಮಾತನ್ನು ನಾನು ಹೇಳಿದ್ದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಇಲ್ಲ ಇಲ್ಲ ನಮ್ಮ ಸರ್ಕಾರ ಬಹಳ ಭದ್ರವಾಗಿದೆ ಕಲೆಕ್ಷನ್ಸ್‌ನ್ನು ನಾವು ಇಂಪ್ರೂವ್ ಮಾಡಿಕೊಂಡಿದ್ದೇವೆ, ಈಗ ಯಾವುದೇ ಬಿಲ್ಸ್ ಪೇಮೆಂಟ್ ಕೂಡ ಸಹಿತ ಬಾಕಿ ಇಲ್ಲ ಎಲ್ಲಾ ಸರಿ ಹೋಗಿದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಮೊನ್ನೆ ದಿವಸ ಸಾಯಂಕಾಲ ನನ್ನ ಕ್ಷೇತ್ರವಾಗಿರತಕ್ಕಂಥ ಕನಕಪುರದಲ್ಲಿ ಒಂದು ಸ್ಪೆಷಲ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಎಂ.ಐ.ಡಿವಿಷನ್ ಆಫೀಸ್ ಇದೆ. ಆ ಆಫೀಸ್‌ನಲ್ಲಿ ಕೋರ್ಟಿನಿಂದ ಅಟ್ಯಾಚ್‌ಮೆಂಟ್ ಬಂದು ಕಂಟ್ರಾಕ್ಟುದಾರರಿಗೆ ಇವರು ದುಡ್ಡನ್ನು ಪಾವತಿ ಮಾಡಿಲ್ಲ. ಅವರು ಲಕ್ಷಾಂತರ ರೂಪಾಯಿ ಕೆಲಸಗಳನ್ನು ಮಾಡಿದ್ದಾರೆ. ರೂ. 1,00,000 ಮತ್ತು 2,50,000 ರೂಪಾಯಿಗಳ ಬಿಲ್‌ಗಳನ್ನು ಪೇಮೆಂಟ್ಸ್ ಮಾಡುವುದಕ್ಕೂ ಸಹ ಸರ್ಕಾರದಲ್ಲಿ ದುಡ್ಡು ಇಲ್ಲ ಎಂದು ಕೋರ್ಟಿನಿಂದ ಅಟ್ಯಾಚ್‌ಮೆಂಟ್ ಮಾಡಿದ್ದಾರೆ. ಅವರು ಬಂದು ಅಲ್ಲಿರತಕ್ಕಂಥ ಟೈಪರೈಟರ್, ಅಲ್ಲಿರತಕ್ಕಂತಹ ಕುರ್ಚಿ, ಬೆಂಚು ಮೇಜು ಎಲ್ಲವನ್ನು ಸಹಿತ ಬೀದಿಗೆ ಎಸೆದಿದ್ದಾರೆ. ಮೊನ್ನೆ ದಿವಸದಿಂದ

ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಅಲ್ಲಿರತಕ್ಕಂಥ ಸಿಬ್ಬಂದಿ ವರ್ಗದವರು ಕನಕಪುರದ ರಸ್ತೆಗಳಲ್ಲಿ ಕುಳಿತುಕೊಂಡು ಆಫೀಸ್ ಮಾಡತಕ್ಕಂಥ ಪರಿಸ್ಥಿತಿ ಬಂದಿದೆ. ನನ್ನ ಕ್ಷೇತ್ರದಲ್ಲಿ ಸುಮಾರು.....

ಅಧ್ಯಕ್ಷರು:- ನೀವೇ ಹೇಳಿದ್ದೀರಿ, ಸರ್ಕಾರ ಓಪನ್ ಆಗಿರಬೇಕು ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ಬಹಳ ಚೆನ್ನಾಗಿ ಹೇಳುತ್ತೀರಿ ನನ್ನ ನೋವನ್ನು ತಾವೂ ಸಹಿತ ಅರ್ಥಮಾಡಿಕೊಂಡು, ನನ್ನ ಸಹಾಯಕ್ಕೆ ಬಂದಿದ್ದೀರಿ. ಏಕೆಂದರೆ ಇದು ಓಪನ್ ಸರ್ಕಾರ ಎಂದು, ಅವರೇ ಹೇಳಿದ್ದಾರೆ. ಈ ಸರ್ಕಾರದ ಹಣಕಾಸಿನ ಪರಿಸ್ಥಿತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸರ್ಕಾರದ ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆ ಎಂದು ಹೇಳಿ ಇನ್ನು ನಾಲ್ಕು ದಿನ ಕೂಡ ಆಗಿಲ್ಲ. ಸರ್ಕಾರಿ ಅಧಿಕಾರಿಗಳ ಕಛೇರಿಯನ್ನು ಕೋರ್ಟಿನಿಂದ ಅಟ್ಯಾಚ್‌ಮೆಂಟ್ ಮಾಡಿದ್ದಾರೆ. ಅಂದರೆ, ಇದರ ಅರ್ಥ ಏನು? ನಿಮ್ಮಲ್ಲಿ ದುಡ್ಡಿಲ್ಲ, ನೀವು ಪಾಪರ್ ಆಗಿದ್ದೀರಿ. ಅಷ್ಟೇ ಅಲ್ಲ 31ನೇ ತಾರೀಖು ಅಲ್ಲಿರತಕ್ಕಂಥ ಎಕ್ಸಿಕ್ಯೂಟಿವ್ ಇಂಜಿನಿಯರ್ ರಿಟೈರ್ಡ್ ಆಗುತ್ತಾರೆ. 22ನೇ ತಾರೀಖು 23ನೇ ತಾರೀಖು ನೀವು ಎಲ್.ಓ.ಸಿ. ರಿಲೀಸ್ ಮಾಡಿದ್ದೀರಿ. 17 ಲಕ್ಷ ರೂಪಾಯಿಗಳು ಆಗದೇ ಇರತಕ್ಕಂಥ ಕೆಲಸಗಳಿಗೆ ಡ್ರಾ ಮಾಡಿಕೊಂಡ 31ನೇ ತಾರೀಖು ರಿಟೈರ್ಡ್ ಆಗಿ ಹೋಗುತ್ತಾನೆ. ಎಲ್ಲಿದೆ ನಿಮ್ಮ ಸರ್ಕಾರ ಎಂದು ನಾನು ಕೇಳುತ್ತಾ ಇದ್ದೇನೆ. ನಾನು ಹೇಳುತ್ತಾ ಇರತಕ್ಕಂಥ ಅಪಾದನೆಯು ಒಂದು ಚೂರು ಏನಾದರೂ ಸತ್ಯಕ್ಕೆ ದೂರವಾಗಿದ್ದರೆ ಅಥವಾ ಸುಳ್ಳಾಗಿದ್ದರೆ, ನೀವು ಏನು ಹೇಳಿದರೂ ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ನೀವು ಎನ್‌ಕ್ವಯರಿ ಮಾಡಿ, ಇದರ ಬಗ್ಗೆ ನಾನು ಪತ್ರ ಬರೆದಿದ್ದೇನೆ. ನಿಮ್ಮ ಸರ್ಕಾರಕ್ಕೆ ಅದು ಅರ್ಥವಾಗುತ್ತಿಲ್ಲ, ಕಾರಣ ಏನು ಅಂತ ಇವತ್ತು ಅರ್ಥವಾಗುತ್ತಿಲ್ಲ. ಅಟ್ಯಾಚ್‌ಮೆಂಟ್ ಆಗಬೇಕಾದರೆ ಅದಕ್ಕಿಂತ ಏನು ಅವಮಾನ ಸರ್ಕಾರಕ್ಕೆ ಆಗಬೇಕು? ಅಷ್ಟೇ ಅಲ್ಲ ಇವತ್ತು ರಾಜ್ಯದಲ್ಲಿ ಅನೇಕ ಸರ್ಕಾರಿ ಕಛೇರಿಗಳನ್ನು ಅಟ್ಯಾಚ್ ಮಾಡತಕ್ಕಂತ ಪರಿಸ್ಥಿತಿ ಬಂದಿದೆ. ಪವರ್ ಕಾರ್ಪೊರೇಷನ್ ಅಟ್ಯಾಚ್‌ಮೆಂಟ್ ಮಾಡತಕ್ಕ ಪರಿಸ್ಥಿತಿ ಬಂದಿದೆ, ವಿಧಾನ ಸೌಧವನ್ನು ಅಟ್ಯಾಚ್ ಮಾಡಿಸುತ್ತೀರಾ ನನಗೆ ಬಂದಿರುವ ಮಾಹಿತಿ ಪ್ರಕಾರ ಟ್ರಜರಿನಲ್ಲೂ ದುಡ್ಡಿಲ್ಲ. ಈ ವಿಷಯ ಬಹಳ ಗಹನವಾಗಿರತಕ್ಕಂಥದ್ದು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳೇ ಇದಕ್ಕೆ ಉತ್ತರ ಕೊಡಬೇಕು. ನಮ್ಮ ರಾಮಸ್ವಾಮಿಯವರು ಬಹಳ ಒಳ್ಳೆಯವರು ಸಂಸದೀಯ ವ್ಯವಹಾರಗಳ ಜವಾಬ್ದಾರಿ ಇವರಿಗೆ ಇದೆ. ಈ ಹಣಕಾಸಿನ ವಿಷಯಕ್ಕೂ, ಈ ವ್ಯವಹಾರಕ್ಕೂ ಅವರಿಗೂ ಯಾವುದೇ ಸಂಬಂಧ ಇಲ್ಲ. ಪಾಪ ನೀವು ಕೇಳುವುದಕ್ಕೆಲ್ಲಾ ನಾನು ಉತ್ತರ ಕೊಡುತ್ತೇನೆಂದು ಅವರು ಸೌಜನ್ಯಕ್ಕೆ ಹೇಳುತ್ತಾರೆ. ನಾನು ನಿಜವಾಗಿಯೂ ಸಹ ಅವರನ್ನು ಮೆಚ್ಚುತ್ತೇನೆ. ನೀವು ಅನುಭವೀ ಸಚಿವರಂತೆ ಉತ್ತರ ಕೊಡುತ್ತಾರೆಂದು ನಾನು ಅವರನ್ನೇ ಅಭಿನಂದಿಸುತ್ತಿದ್ದೇನೆ. ಈ ಉತ್ತರದಿಂದ ನಮಗೆ ಏನು ಸಿಕ್ಕುತ್ತಾ ಇಲ್ಲ. ಆದುದರಿಂದ ಇವತ್ತು ಸಂಜೆಯೊಳಗೆ ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ಏಕೆ ಅಟ್ಯಾಚ್‌ಮೆಂಟ್ ಆಗುತ್ತಿದೆ? ಪ್ರತಿಯೊಂದು ಜಿಲ್ಲೆಯಲ್ಲೂ ಸಹ ಅಟ್ಯಾಚ್‌ಮೆಂಟ್ ಆಗುವುದಕ್ಕೆ ಕಾರಣ ಏನು? ಸರ್ಕಾರದ ಹಣಕಾಸಿನ ಪರಿಸ್ಥಿತಿ ಏನು ಎಂದು ಉತ್ತರ ಕೊಡಬೇಕು.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಸಿಂಧ್ಯಾರವರು ಎತ್ತಿದ ಈ ವಿಚಾರಕ್ಕೆ ಧ್ವನಿಗೂಡಿಸಿ ಒಂದು ಮಾತನ್ನು ಹೇಳುತ್ತೇನೆ. ಕಾಮಗಾರಿ ಕೆಲಸಗಳು ಇಡೀ ರಾಜ್ಯದಲ್ಲಿ ನಿಂತು ಹೋಗಿವೆ. ಸುಮಾರು 20 ಕೋಟಿ ರೂಪಾಯಿಗಳನ್ನು ಕಂಟ್ರಾಕ್ಟರ್‌ಗಳಿಗೆ ಸರ್ಕಾರ ಬಾಕಿ ಕೊಡಬೇಕಾಗಿದೆ. ಕಂಟ್ರಾಕ್ಟ್‌ದಾರರುಗಳು ಏನೂ ಕೆಲಸ ಮಾಡುತ್ತಾ ಇಲ್ಲ. ನಮ್ಮ ನಮ್ಮ ತಾಲ್ಲೂಕಿನಲ್ಲಿ ಕೆಲಸ ಮಾಡಿ ಎಂದು ಹೇಳಿದರೆ ಇವತ್ತು ಒಬ್ಬರೂ ಕೆಲಸ ಮಾಡುವುದಕ್ಕೆ ತಯಾರು ಇಲ್ಲ. ಸಿಂಧ್ಯಾರವರು ಏನು ಹೇಳಿದ್ದಾರೆ ಸಣ್ಣ ನೀರಾವರಿ ಇಲಾಖೆಗೆ ಸೇರಿದಂಥ

ಕಾರ್ಯಾಲಯಗಳನ್ನು ಜಪ್ತಿ ಮಾಡತಕ್ಕಂಥ ಪರಿಸ್ಥಿತಿ ಬರೀ ಕನಕಪುರದಲ್ಲಿ ಒಂದೇ ಅಲ್ಲ, ಸಣ್ಣ ನೀರಾವರಿ ಒಂದೇ ಅಲ್ಲ, ಲೋಕೋಪಯೋಗಿ ಇಲಾಖಾ ಕಾರ್ಯಗಳಲ್ಲೂ ಕೂಡ ಜಪ್ತಿ ಮಾಡುವ ಪರಿಸ್ಥಿತಿ ಈ ರಾಜ್ಯಾದ್ಯಂತ ಬಂದಿದೆ. ಇದರ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದ ಉತ್ತರ ಕೊಡಬೇಕು. ಕಂಟ್ರಾಕ್ಟ್‌ರ್‌ಗಳ ಬಿಲ್ಲುಗಳನ್ನು ಪಾವತಿ ಮಾಡಬೇಕಾಗಿದೆ. ಇಡೀ ಕರ್ನಾಟಕದ ತುಂಬಾ ಕೆಲಸ ನಿಂತು ಹೋಗಿದೆ. ನಾವು ಪ್ರತಿ ತಾಲೂಕಿನಲ್ಲೂ 12 ಲಕ್ಷ ಕೊಟ್ಟಿದ್ದೇವೆ; 20 ಲಕ್ಷ ಕೊಟ್ಟಿದ್ದೇವೆ, ಶಾಸಕರು ಹೇಳಿದ ಕೆಲಸಗಳನ್ನು ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ. ಆದರೆ ಯಾವ ಕೆಲಸವೂ ಆಗಿಲ್ಲ. ಈ ಸದನದಲ್ಲಿ ಕೊಟ್ಟ ರತಕ್ಕ ಭರವಸೆಯ ಪ್ರಕಾರ ಲೋಕೋಪಯೋಗಿ ಇಲಾಖೆಯ ಕೆಲಸಗಳು ಇಡೀ ಕರ್ನಾಟಕದ ಉದ್ದಗಲಕ್ಕೂ ಎಲ್ಲಿ ನೋಡಿದರೂ ಕೆಲಸಗಳು ಆಗಿಲ್ಲ. ಈ ಸರ್ಕಾರ ಒಂದು ರೀತಿಯಲ್ಲಿ ದಿವಾಳಿತನದ ಕಡೆ ಹೋಗುತ್ತಿದೆ. ನೀವು ಬಂದು ಒಂದು ಒಂದೂವರೆ ತಿಂಗಳು ಆಗಿದೆ. ನಿಮ್ಮ ಸರ್ಕಾರದ ಕಡೆಗೆ ನಾವು ನೇರವಾಗಿ ತೋರಿಸುತ್ತಾ ಇಲ್ಲ. ಯಾರೋ ಮಾಡಿದ್ದಕ್ಕೆ ನೀವು ಸಿಕ್ಕಿದ್ದೀರಿ. ಆದರೆ ನೀವು ಅಧಿಕಾರದಲ್ಲಿರುವುದರಿಂದ ನಾವು ನಿಮಗೆ ನೇರವಾಗಿ ಹೇಳಬೇಕಾಗುತ್ತದೆ. ಈ ಬಗ್ಗೆ ತಾವು ಪರಿಶೀಲನೆ ಮಾಡಿ ಕೂಡಲೇ ಪ್ರಾಮಾಣಿಕವಾದ ಒಂದು ಉತ್ತರ ಕೊಡಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಕಳಕಳಿಯಿಂದ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ):- ಮಾನ್ಯ ಸಿಂಧ್ಯರವರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ನಾನು ಸ್ವಲ್ಪ ದ್ವನಿಗೂಡಿಸುತ್ತೇನೆ. ಪವರ್ ಕಾರ್ಪೊರೇಷನ್‌ಗೋಸ್ಕರ ಮುಳುಗಡೆಯಾದ ಪ್ರದೇಶದ ರೈತರಿಗೆ ಕೊಡಬೇಕಾಗಿರತಕ್ಕಂಥ, ಆಕ್ವಿಸಿಷನ್ ಮಾಡಿಕೊಂಡಿರತಕ್ಕಂಥ, ಭೂಮಿಗೆ ಪರಿಹಾರಧನ ಕೊಡುವುದಕ್ಕೂ ಇಲ್ಲದೇ ಪವರ್ ಕಾರ್ಪೊರೇಷನ್ ಆಫೀಸ್ ಅಟ್ಯಾಚ್‌ಮೆಂಟ್ ಆಗುತ್ತದೆ. The judgements of the courts are not being respected by the Power Corporation. ದಯಮಾಡಿ ಇದನ್ನು ಲಘುವಾಗಿ ತೆಗೆದುಕೊಳ್ಳಬಾರದು. ನಾವು ಇದಕ್ಕಾಗಿಯೇ ಕೇಳಿದ್ದುದು, ನಾನೇ ಒಂದು ಪ್ರಶ್ನೆ ಕೇಳಿದ್ದೆ. ನಿಮ್ಮ ಫೈನಾನ್ಸಿಯಲ್ ಪೊಸಿಷನ್ ಏನು ಎಂದು. ಏಕೋ ಉತ್ತರ ಇನ್ನು ಬಂದಿಲ್ಲ. ಬಂದರೆ ಅದನ್ನು ಪ್ರಸ್ತಾಪ ಮಾಡೋಣ. ಒಂದು ವೈಟ್ ಪೇಪರನ್ನಾದರೂ ಕೊಡಿ ಎಂದು ಕೇಳಿದ್ದೆ.

ಅಧ್ಯಕ್ಷರು:- ಈ ಬಜೆಟ್ ಬರುತ್ತಲ್ಲ, ವೈಟ್ ಪೇಪರ್.....

ಶ್ರೀ ಡಿ.ಬಿ. ಚಂದ್ರೇಗೌಡ:- ಬಜೆಟ್ ಮುಂದಿನ ಸಾಲಿಗೆ ಬರುತ್ತದೆ. ಹಿಂದಿನ ಸಾಲಿನಲ್ಲಿ ಏನಾಗಿದೆ ಎಂದು ಗೊತ್ತಿಲ್ಲ ನಮಗೆ. ಏಕೆ ಎಂದು ಹೇಳಿದರೆ ಕನ್‌ಸಾಲಿಡೇಟಡ್ ಫಂಡ್ ಆಫ್ ಇಂಡಿಯಾ ದುಡ್ಡೇ ಮಿಸ್ ಯೂಸ್ ಆಗಿದೆ. ನಾವು ಇವರಿಗೆ ಕನ್‌ಸಾಲಿಡೇಟೆಡ್ ಫಂಡ್‌ನಿಂದ ಚಾರ್ಜ್ ಮಾಡಿ ಐದು ನೂರು ಕೋಟಿ ಕಂಟಿಜೆನ್ಸಿ ಫಂಡ್ ಎಂದು ಕೊಟ್ಟಿದ್ದೆವು. ಆ ಹಣ ಸಾರ್ವಜನಿಕವಾಗಿ ಕಾಂಗ್ರೆಸ್ಸಿನ ಮತ್ತು ಮುಖ್ಯಮಂತ್ರಿಗಳು ತಮ್ಮ ಪ್ರಸಿದ್ಧಿಯನ್ನು ಅಥವಾ ಪ್ರತಿಷ್ಠೆಯನ್ನೋ ಬೆಳೆಸಿಕೊಳ್ಳುವುದಕ್ಕಾಗಿ ಬಳಸಿಕೊಂಡಿದ್ದಾರೆ. ಇವೆಲ್ಲವೂ ಗೊತ್ತಿದೆ. ಅದಕ್ಕಾಗಿ ಒಂದು ವೈಟ್ ಪೇಪರ್ ಕೊಡಿ ಎಂದು ಕೇಳಿದ್ದೆ. ಮಾನ್ಯ ಅಧ್ಯಕ್ಷರೆ ತಮಗೆ ಗೊತ್ತಿದೆ ಏನಾಗುತ್ತಿದೆ ಎಂದು. ಬಜೆಟ್ ಪ್ರೆಸೆಂಟ್ ಮಾಡುತ್ತೇವೆ, ಪರ್‌ಫಾರ್ಮೆನ್ಸ್ ಬಜೆಟ್ ಬರುವುದೇ ಇಲ್ಲ, ಮತ್ತೊಂದು ಬಜೆಟ್ ಪ್ರೆಸೆಂಟ್ ಮಾಡುತ್ತಾರೆ. ಆ ಬಜೆಟ್‌ಗೆ ಮಧ್ಯೆ ಎರಡೆರಡು ಜನ ಮುಖ್ಯಮಂತ್ರಿಗಳು ಆಗಿರುತ್ತಾರೆ. ಮೂರು ಮೂರು ಜನ ಫೈನಾನ್ಸ್ ಮಿನಿಸ್ಟರ್ ಆಗಿರುತ್ತಾರೆ. ನಾವು ಯಾವ ರೀತಿ ಈ ಸದನದ ಮೂಲಕ ಜನಕ್ಕೆ ನಮ್ಮ ಅಭಿಪ್ರಾಯವನ್ನು ತಿಳಿಸಬೇಕು.

ಅಧ್ಯಕ್ಷರು:- ಒಬ್ಬರೇ ಮುಖ್ಯಮಂತ್ರಿ 5 ವರ್ಷ ಇರಬೇಕು ಎಂದು ಹೇಗೆ ನಿರ್ಬಂಧ ಮಾಡುವುದಕ್ಕೆ ಆಗುತ್ತದೆ?

ಶ್ರೀ ಡಿ.ಬಿ. ಚಂದ್ರೇಗೌಡ:– ನಿರ್ಬಂಧ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಕಾಂಗ್ರೆಸ್ ಇದೆಯಲ್ಲ ಖಾಯಂ ಆಗಿ. ಕಾಂಗ್ರೆಸ್ ಸರ್ಕಾರ 3 ವರ್ಷ ಖಾಯಂ ಆಗಿ ಇದೆಯಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ನಗರಪಾಲಿಕೆಯಲ್ಲಿ ವರ್ಷಕ್ಕೆ ಒಬ್ಬೊಬ್ಬರು ಮೇಯರ್ ಬರುವ ಹಾಗೆ ವರ್ಷಕ್ಕೆ ಒಬ್ಬೊಬ್ಬರು ಮುಖ್ಯಮಂತ್ರಿಗಳು ಬಂದುಬಿಟ್ಟರೆ ಎಲ್ಲಾ ಸರಿಹೋಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಅದನ್ನಾದರೂ ಒಂದು ತೀರ್ಮಾನ ಮಾಡಿದರೆ ಆಗಬಹುದು ವರ್ಷಕ್ಕೆ ಒಬ್ಬರು ಮುಖ್ಯಮಂತ್ರಿ ಎಂದು. Please inform this House as to what is the financial position of your State? ಇದರಲ್ಲಿ ಮುಚ್ಚಿಡತಕ್ಕಂಥಾದ್ದು ಏನೂ ಇಲ್ಲ, ಮುಚ್ಚಿಡಬೇಕಾದ ಅಗತ್ಯವೂ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಈಗ ಈ ವೈಟ್ ಪೇಪರ್ ಬಗ್ಗೆ ಮಾನ್ಯ ಚಂದ್ರೇಗೌಡರು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ನಾನು ಮುಖ್ಯಮಂತ್ರಿಗಳಲ್ಲಿ ಪ್ರಸ್ತಾಪ ಮಾಡಿದ್ದೆ. ತಾವು ಏನು ಹೇಳಿದ್ದೀರಿ ಅದೇ ಉತ್ತರ ಅವರು ಕೊಟ್ಟರು. ಅವರಿಗೆ ನಾನು ಹೇಳಿದೆ. ಅದು ಬಜೆಟ್ ಪ್ರಶ್ನೆ ಅಲ್ಲ. 16ನೇ ನವೆಂಬರ್‌ಗೆ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಎಲ್ಲಾ ಪತ್ರಿಕೆಗಳಲ್ಲಿ ಬಹಳ ಅಡ್ವರ್ಟೈಸ್‌ಮೆಂಟ್ ಹಾಕಿದ್ದರು. ಫುಲ್ ಎರಡು ಪೇಜ್ ಅಡ್ವೆರ್ಟೈಸ್‌ಮೆಂಟ್. ಒಂದು ಕಡೆ ರಿಸೋರ್ಸಸ್ ಮೊಬಲೈಸೇಷನ್ ಏನು ಮಾಡಿದ್ದೇವೆ ಎಂದು, ಮತ್ತೊಂದು ಕಡೆ ಆಚೀವ್‌ಮೆಂಟ್ ಏನು ಎಂದು. ಆ ಅಡ್ವರ್ಟೈಸ್‌ಮೆಂಟ್‌ಗೆ ದುಡ್ಡು ಎಷ್ಟೋ ಹೋಗಿದೆ. ಅಡ್ವರ್ಟೈಸ್‌ಮೆಂಟ್ ಸರ್ಕಾರವೇ ಆಗಿಹೋಯಿತು. ಆದರೆ ಆ ಆಚೀವ್‌ಮೆಂಟ್ಸ್ ಏನು ಆ ರಿಸೋರ್ಸಸ್ ಮೊಬಲೈಸೇಷನ್ ಏನು, ಇದರ ಬಗ್ಗೆ ವೈಟ್ ಪೇಪರ್ ಕೊಡಲಿಕ್ಕೆ ನಿಮಗೆ ಕಷ್ಟ ಆಗಬಾರದು. ಎರಡನೆಯದು ಪ್ಲಾನಿಂಗ್ ಕಮಿಷನ್ ಮುಂದೆ ಹೋಗಿ Next Year ಗೆ 3,025 ಕೋಟಿ ಪ್ಲಾನ್ ಮಂಜೂರು ಮಾಡಿಕೊಂಡು ಬಂದಿರಿ. ರಿಸೋರ್ಸಸ್ ಮೊಬಲೈಸ್ ಮಾಡುವುದಕ್ಕೆ ಮಾಡಿಕೊಂಡು ಬಂದಿದ್ದೇವೆ ಎಂದು ಹೇಳಿದಿರಿ. ಹಾಗಿದ್ದರೆ ಇದೇ ತಿಂಗಳು ಡಿಸೆಂಬರ್ 27–28 ನಮ್ಮ ಟ್ರೆಜರಿ ಬ್ಯಾನ್. ಗವರ್ನ್‌ಮೆಂಟ್ ಇಲ್ಲಿ ಇಲ್ಲ ಎಂದು ಹೇಳಲಿ. ನಿಮ್ಮ ರಿಸೋರ್ಸೆಸ್ ಪೊಸಿಷನ್ ಚೆನ್ನಾಗಿ ಇದ್ದರೆ ಟ್ರೆಜರಿಗೆ ಬ್ಯಾನ್ ಏಕೆ ಹಾಕುತ್ತಾ ಇದ್ದೀರಿ. On the 27th of December, there was a Treasury ban. In the entire State, the Development works have come to a standstill. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ನಾನು ತಂದೆ. ಒಂದೂ ಡೆವಲಪ್‌ಮೆಂಟ್ ಕೆಲಸ ನಡೆಯುತ್ತಾ ಇಲ್ಲ. ಅದು ಮಲೆನಾಡು ಇಲ್ಲ, ಹೈದರಬಾದ್ ಕರ್ನಾಟಕ ಡೆವಲಪ್‌ಮೆಂಟ್ ಅಲ್ಲ, ಯಾವ ಅಭಿವೃದ್ಧಿಯೂ ಇಲ್ಲ. ಯಾವ ಕೆಲಸವೂ ಇಲ್ಲ. ಇವತ್ತೂ ಕೇವಲ ಸ್ಯಾಲರಿ ಕೊಡುವ ಕೆಲಸ ಅದೂ ಸಹ ಬಹಳ ಕಷ್ಟದಿಂದ ನಡೆಯುತ್ತಾ ಇದೆ. ಹಾಗಾಗಿ ತಾವು ನಿಮ್ಮ ಪೊಸಿಷನ್ ಏನು ಎಂದು ಸ್ಪಷ್ಟವಾಗಿ ಹೇಳಬೇಕು. ನಿಮಗೆ ನಮ್ಮಲ್ಲಿ ಕಾನ್ಫಿಡೆನ್ಸ್ ಇದ್ದರೆ ನಾವು ಬೇಕಾದರೆ ಸಲಹೆ ಕೊಡಬಹುದು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಅಧ್ಯಕ್ಷರೆ, ಕೋರ್ಟಿನಿಂದ ಆಫೀಸ್ ಫರ್ನಿಚರ್ ಇತ್ಯಾದಿ ಜಪ್ತಿ ಮಾಡಿದ್ದಾರೆ ಎನ್ನುವ ಒಂದು ಮಾತನ್ನು ಹೇಳಿದರು. ಆ ಒಂದು ಅಂಶವನ್ನು ತೆಗೆದುಕೊಂಡು ಸರ್ಕಾರದಲ್ಲಿ ಹಣಕಾಸು ಇಲ್ಲ, ಸರ್ಕಾರ ದಿವಾಳಿಯಾಗಿದೆ ಇತ್ಯಾದಿಯಾಗಿ ಔದಾರ್ಯರಹಿತವಾದಂತಹ ಕಾಮೆಂಟ್ ಮಾಡಿರುವುದು ಸರಿಯಲ್ಲ. ಕೋರ್ಟಿನಿಂದ ಅಟ್ಯಾಚ್‌ಮೆಂಟ್ ಆಗಬೇಕಾದರೆ ಡಿಕ್ರಿ ಇರಬೇಕು. ದಾಪ ಹಾಕಿ ಡಿಕ್ರಿ ಇರಬೇಕು. ಡಿಕ್ರಿ ಜಾರಿ ಕೊಟ್ಟು ನೋಟೀಸ್ ಹೋಗಿ ನಾವು ಅದರಂತೆ ನಡೆದುಕೊಳ್ಳದೆ ಹೋದರೆ ಕೋರ್ಟಿನವರು ಅಟ್ಯಾಚ್‌ಮೆಂಟ್ ಆರ್ಡರ್ ಕೊಡುತ್ತಾರೆ. ಇದರ ಅರ್ಥ ಏನೆಂದರೆ ಸಂಬಂಧಪಟ್ಟ

ಅಧಿಕಾರಿಗಳು ಡಿಕ್ರಿಯನ್ನು ಎದುರಿಸುವುದಕ್ಕೆ ಅಥವಾ ಕಾಲ ತೆಗೆದುಕೊಳ್ಳುವುದಕ್ಕೆ ಸರಿಯಾದ ವಕೀಲರನ್ನು ನೇಮಿಸಿಲ್ಲ ಅಥವಾ ನಿಗಾ ತೆಗೆದುಕೊಂಡಿಲ್ಲ. It is purely because of the carelessness of the concerned officer. ನಾನು 35 ವರ್ಷ ವಕೀಲಿ ಮಾಡಿದ್ದೇನೆ.

(ಗೊಂದಲ)

ನಾನು ಹೇಳುವುದನ್ನು ಸ್ವಲ್ಪ ದಯವಿಟ್ಟು ಕೇಳಿ, ತಮಗೆ ಸಮಾಧಾನ ಆಗಬೇಕು ಎಂದು ನಾನು ಹೇಳುತ್ತಾ ಇಲ್ಲ. It is left to them to be satisfied or not, but this is the practice. ಅಟ್ಯಾಚ್‌ಮೆಂಟ್ ಆಗುವ ಸಂದರ್ಭ ಆಗಬೇಕಾದರೆ ಡಿಕ್ರಿ ಇರಬೇಕು.

Mr.SPEAKER:- Legally you are on a very sound footing.

Sri HARNAHALLY RAMASWAMY:- Factually also there can not be an Attachment without a decree. ಅಧಿಕಾರಿಗಳ ಕೇರ್‌ಲೆಸ್‌ನೆಸ್‌ನಿಂದ ಆಗಿರುತ್ತದೆಯೇ ವಿನಹ ಸರ್ಕಾರದ ವತಿಯಿಂದ ಆಗಿಲ್ಲ. ದಿವಾಳಿಯಾಗಿದೆ ಎಂದು ಹೇಳುವುದು ಸರಿಯಲ್ಲ. ಆದರೆ ಸರ್ಕಾರದ ಹಣಕಾಸಿನ ಪರಿಸ್ಥಿತಿ ಹೇಗಿದೆಯೆಂದು ಕೇಳಿದ್ದಾರೆ ಇದು ನ್ಯಾಯವಾದದ್ದು. ಈಗ ರಾಜ್ಯಪಾಲರ ಭಾಷಣ ಬರುತ್ತದೆ; ಬಜೆಟ್ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ, ಮುಖ್ಯಮಂತ್ರಿಗಳು ಬಂದಾಗ ಉತ್ತರ ಕೊಡಿಸಿ. ಅಲ್ಲಿ ಕೇಳಿದರೆ ದುಡ್ಡು ಇಲ್ಲವೆಂದು ಹೇಳುತ್ತಾರೆ. ಅಲ್ಲಿ ಯಾವ ಬಿಲ್ಲೂ ಪಾಸ್ ಆಗಿಲ್ಲ.

ಅಧ್ಯಕ್ಷರು:- ವೈಟ್ ಪೇಪರ್ ಹೊರಡಿಸಿದರೆ ದುಡ್ಡು ಬರುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್:- ವೈಟ್ ಪೇಪರ್ ಬೇಕಾಗಿಲ್ಲ, ನಮಗೆ ದುಡ್ಡು ರಿಲೀಜ್ ಆಗಬೇಕು.

ಅಧ್ಯಕ್ಷರು:- ದುಡ್ಡು ಇಲ್ಲದಿದ್ದರೆ, ದುಡ್ಡು ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಈಗ ಅದು ಹೇಳಿ ಸ್ವಾಮಿ, ನಮ್ಮ ಸರ್ಕಾರದಲ್ಲಿ ದುಡ್ಡು ಇಲ್ಲ ಎಂದು ಹೇಳಿ.

ಅಧ್ಯಕ್ಷರು:- ಅದನ್ನೇ ನೀವು ಮುಂದಿನ ತಿಂಗಳು 22ರವರೆಗೂ ಕಾಯಿರಿ, ಬಜೆಟ್ ಬರುತ್ತದೆ. ಸರ್ಕಾರದಲ್ಲಿ ಹಣ ಇದೆಯೋ, ಇಲ್ಲವೋ ಎನ್ನುವುದಕ್ಕೆ ಕನ್ನಡಿ, ಅವರು ಮಂಡಿಸತಕ್ಕಂಥ ಆಯವ್ಯಯ ಪತ್ರ. ಆ ಪತ್ರ 22ನೇ ತಾರೀಖು ಬರುತ್ತದೆ, ಅಲ್ಲಿಯವರೆಗೂ ಸ್ವಲ್ಪ ಕಾಯಿರಿ.....

(ಗೊಂದಲ)

60 ದಿವಸ ಕಾಯ್ದಿದ್ದಿರಂತೆ, ಇನ್ನು 20 ದಿವಸ ಕಾಯಿರಿ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದು ಏನೆಂದರೆ, ಈ ವರ್ಷದ ಫೈನಾನ್‌ಷಿಯಲ್ ಇಯರ್ ಕೇವಲ 3 ತಿಂಗಳು ಇದೆ, ಮೂರು ತಿಂಗಳು ಇಲ್ಲ ಎರಡೂವರೆ ತಿಂಗಳು ಮಾತ್ರ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಈಗ ಡಿಕ್ರಿಯಾದರೂ ಆಗಲಿ, ಅಟ್ಯಾಚ್‌ಮೆಂಟ್ ಆದರೂ ಆಗಲಿ, ನಾವು ಬೀದಿಯಲ್ಲೇ ಸರ್ಕಾರಿ ಕಛೇರಿಗಳನ್ನು ನಡೆಸಿಕೊಂಡು ಅಲ್ಲಿಯೇ ಕುಳಿತುಕೊಂಡಿರುತ್ತೇವೆ, ನಮ್ಮ ಆಫೀಸ್ ಅಟ್ಯಾಚ್ ಆಗಲಿ ಎನ್ನುವುದಾದರೆ ನನ್ನದೇನೂ ತಕರಾರು ಇಲ್ಲ. ನೀವು ಬೀದಿಯಲ್ಲಿಯೇ ಇರಿ. ಆದರೆ ನಾನು ಏನು ಕೇಳುತ್ತಿದ್ದೇನೆ ಎಂದರೆ, ನನ್ನ ಕ್ಷೇತ್ರದಲ್ಲಿ ಇರತಕ್ಕಂಥ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸ್ ನಿಜವಾಗಿಯೂ

ಅಟ್ಯಾಚ್ ಆಗಿದೆ. ಎಲ್ಲರೂ ಸಹ ಬೀದಿಯಲ್ಲಿ ಕುಳಿತ್ತಿದ್ದಾರೆ. ಅವರು ಏನು ಮಾಡಬೇಕು. ಅದಕ್ಕ ಕ್ರಮವನ್ನಾದರೂ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಹೇಳಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನೀವು ಸುಮ್ಮನೆ ನಿಂತುಕೊಂಡು ಇಲ್ಲಿ ಸಾಯಂಕಾಲ ಹೋಗುತ್ತೇವೆ ಎಂದು ಹೇಳತಕ್ಕದ್ದು, ಎಲ್ಲಾ ಸತ್ಯಕ್ಕೆ ದೂರವಾದುದು. ನೀವು ಲಾಯರ್ ಇದ್ದೀರಿ. ನೀವು ಒಳ್ಳೆಯ ಸಕ್ಸೆಸ್‌ಫುಲ್ ಲಾಯರ್ ಎನ್ನುವುದು ನಮಗೆಲ್ಲ ಗೊತ್ತಿರುವ ವಿಚಾರವೆ. ನೀವು ಲಾಯರ್ ಭಾಷೆಯಲ್ಲಿ ಉತ್ತರ ಕೊಟ್ಟರೆ ನಾವು ಜನಗಳಿಗೆ ಏನು ಉತ್ತರ ಕೊಡಬೇಕು. ಇವತ್ತು ಅಸೆಂಬ್ಲಿ ಮುಗಿಯುತ್ತಿದೆ. ನಮ್ಮ ಕ್ಷೇತ್ರದ ಜನ ಬಂದು ನಮ್ಮನ್ನು ಕೇಳುತ್ತಾರೆ. ಆಗ ನಾವು ಏನು ಹೇಳುವುದು?

ಶ್ರೀ ವಾಟಾಳ್ ನಾಗರಾಜ್:– ಸರ್ಕಾರದ ನೀತಿ ಏನು ಎನ್ನುವುದರ ಬಗ್ಗೆ ಈಗ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಕಳಕಳಿಯ ಉತ್ತರವನ್ನು ಕೊಡಿಸುತ್ತೀರೋ ಅಥವಾ ಭರವಸೆ ಕೊಡಿಸುತ್ತೀರೋ,

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಪ್ರತಿಯೊಂದು ಹಳ್ಳಿಗೆ ಬಲ್ಬ್‌ನ್ನು ಕೊಳ್ಳಲಿಕ್ಕೆ ಮಂಡಲ್ ಪಂಚಾಯತ್ ಸೆಕ್ರೆಟರಿಗಳು ಕೊಟ್ಟಿರತಕ್ಕಂಥ ಬಿಲ್ ಪಾಸ್ ಆಗಿಲ್ಲ. ಟ್ರಜರಿಯಲ್ಲಿ ಮಿನಿ ವಾಟರ್ ಸಪ್ಲೈ ಬಿಲ್‌ಗಳು, ಎಲೆಕ್ಟ್ರಿಕ್ ಬಿಲ್‌ಗಳು ಸಹಿತ ಪಾಸ್ ಆಗಿಲ್ಲ. ಈ ಸರ್ಕಾರದವರು ಬಿಲ್ಲ್‌ಗಳನ್ನು ನೀವು ಪಾಸ್ ಮಾಡಬೇಡಿ ಎಂದು ಎಲ್ಲಾ ಕಡೆ ಇನ್‌ಸ್ಟ್ರಕ್ಷನ್ ಕಳುಹಿಸಿದ್ದಾರೆ. ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಅನೇಕ ಕಡೆ ಶಂಕು ಸ್ಥಾಪನೆಯನ್ನು ಮಾಡಿದ್ದಾರೆ. ಶಂಕು ಸ್ಥಾಪನೆಗೆ ಮಾಡಿದ ಕಟ್ಟಡದ ಕಲ್ಲಿಗೆ ಇಲ್ಲಿಯವರೆಗೂ ದುಡ್ಡು ಕೊಟ್ಟಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ.

(ಗೊಂದಲ)

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೇನೆಂದರೆ, ಫೈನಾನ್ಷಿಯಲ್ ಇಯರ್ ಕೇವಲ ಇನ್ನು ಎರಡೂವರೆ ತಿಂಗಳು ಮಾತ್ರ ಇದೆ. ಬಜೆಟ್‌ನಲ್ಲಿ ಸಾಕಷ್ಟು ಹಣವನ್ನು ಇಟ್ಟಿದ್ದಾರೆ. ಕೆಲವು ಕಡೆ ಕೋರ್ಟ್ ಅಟ್ಯಾಚ್‌ಮೆಂಟ್ ಆಗಿದೆ. ಸರ್ಕಾರದಲ್ಲಿ ದುಡ್ಡಿಲ್ಲವೆಂದರೆ ಯಾವ ಕಂಟ್ರಾಕ್ಟರ್‌ಗಳೂ ಕೆಲಸ ಮಾಡುವುದಿಲ್ಲ. ಹೀಗಾಗಿ ಅನೇಕ ಕೆಲಸಗಳು ನಿಂತು ಹೋಗುತ್ತಿವೆ.

ಅಧ್ಯಕ್ಷರು:– ಇಬ್ಬರು ಏಕಕಂಠದಲ್ಲಿ ಏನಿದು? ''ಒಬ್ಬರದು ಕಲ್ಯಾಣಿ ರಾಗ, ಇನ್ನೊಬ್ಬರದು ಕಾಂಬೋದಿ ರಾಗ'' ಯಾರಾದರೂ ಒಬ್ಬರು ಮಾತನಾಡಿ. ಸದನಕ್ಕೆ ಅರ್ಥವಾಗುವುದು ಬೇಡ, ನನಗಾದರೂ ಅರ್ಥವಾಗಬಾರದೇ;

ಶ್ರೀ ಡಿ.ಬಿ. ಚಂದ್ರೇಗೌಡ:– ಶ್ರೀ ರಾಮಸ್ವಾಮಿಯವರು ಪ್ರಿನ್ಸಿಪಾಲ್ ಆಗಿ ಲಾ ಕಾಲೇಜಿನಲ್ಲಿ ಕೆಲಸ ಮಾಡಿದ್ದಾರೆ. ನಾವೆಲ್ಲರೂ ವಿದ್ಯಾರ್ಥಿಗಳಾಗಿದ್ದೆವು. ಆದರೆ ಶಾಸನ ಸಭೆಯಲ್ಲಿ ಉತ್ತರವನ್ನು ಯಾವ ರೀತಿ ಕೊಡಬೇಕು.....

ಅಧ್ಯಕ್ಷರು:– ಮಾನ್ಯ ಸದಸ್ಯರುಗಳು ಗಮನಿಸಬೇಕು, ಮಾನ್ಯ ಸಂಸದೀಯ ಸಚಿವರು ಏನು ಹೇಳಿದರು ಎಂದರೆ, ಲ್ಯಾಪ್ಸ್ ಆಗಿರಬಹುದು. Laps on the part of the Particular Officers ಹಾಗೆ ಅಂತ ಹೇಳಿದ್ದಾರೆ. ಅದನ್ನು ವಿಚಾರಣಾ ಮಾಡಿಸುತ್ತೇನೆ ಮತ್ತು ಕ್ರಮ ತೆಗೆದುಕೊಳ್ಳುತ್ತೇನೆ ಎಂದೂ ಸಹಾ ಹೇಳಿದ್ದಾರೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಕ್ರಮ ತೆಗೆದುಕೊಳ್ಳುತ್ತೇನೆ ಮತ್ತು ವಿಚಾರಣೆ ಮಾಡಿಸುತ್ತೇನೆ.

ಅಧ್ಯಕ್ಷರು:– ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಆಮೇಲೆ ನಿಮಗೆ ತಿಳಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್:– ಈ ರಾಜ್ಯದ ಪರಿಸ್ಥಿತಿ ಹೀಗಾಗಿದೆ. ತಮ್ಮ ಗಮನಕ್ಕೆ ತಂದರೂ ಇನ್ನೂ ಶಂಕುಸ್ಥಾಪನೆಗಳ ಕಲ್ಲುಗಳಿಗೆ ಹಣ ಬಿಡುಗಡೆ ಆಗಿಲ್ಲ.

ಅಧ್ಯಕ್ಷರು:– ಕಲ್ಲುಗಳಿಗೆ ಎಷ್ಟು ಬೇಕೋ ಅದನ್ನು ಕೊಡಿಸುವುದಕ್ಕೆ ನಾನು ಗ್ಯಾರಂಟಿ ಕೊಡುತ್ತೇನೆ.

Sri HARNAHALLY RAMASWAMY:- Mr.Speaker, Sir, I am given to understand that no bill is pending for more than 15 days as on today.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ:– 6 ತಿಂಗಳಿನಿಂದ ಪೇಮೆಂಟ್ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಲೋಕೋಪಯೋಗಿ ಇಲಾಖೆ ಒಂದರಲ್ಲಿ ಕಾಮಗಾರಿಗಳಿಗೆ 20 ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡಬೇಕಾಗಿದೆ. ಮಾನ್ಯ ಸಚಿವರು ಸತ್ಯಕ್ಕೆ ದೂರವಾದ ಮಾತನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು:– ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಈ ಬಗ್ಗೆ ಪ್ರತಿಯೊಬ್ಬ ಅಧಿಕಾರಿಗಳಿಗೂ ಆದರಲ್ಲೂ ಲೋಕೋಪಯೋಗಿ ಇಲಾಖೆಯಲ್ಲಿ 15 ದಿವಸಗಳ ಮೇಲೆ ಬಿಲ್ ಇಟ್ಟುಕೊಳ್ಳಬೇಡಿ, ಪೇಮೆಂಟ್ ಮಾಡಬೇಕು ಎಂದು ಹೇಳಿದ್ದೇನೆ, ಸುತ್ತೋಲೆ ಕಳಿಸಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– 50 ಕೋಟಿ ರೂಪಾಯಿ ಹಣ ಕೊಡಬೇಕಾಗಿದೆ ಎಂದು ಮುಖ್ಯಮಂತ್ರಿಗಳೇ ಈ ಸಭೆಯಲ್ಲಿ ಹೇಳಿದ್ದಾರೆ. ಈಗ ಸಂಸದೀಯ ಖಾತೆ ಸಚಿವರು No bill is pending ಎಂದು ಹೇಳಿದರೆ ನಾವು ಎಲ್ಲಿಗೆ ಹೋಗಬೇಕು?

ಶ್ರೀ ಪಿ.ಜಿ.ಆರ್. ಸಿಂಧ್ಯ:– ಇವರು ಏನು ಹೇಳಿದ್ದಾರೆ. ಅದು ಕರೆಕ್ಟ್ ಆಗಿದೆ. ರಾಮಸ್ವಾಮಿಯವರು ಹೇಳಿರುವುದು ವಕೀಲಿ ಉತ್ತರವಾಗಿದೆ. ಹೇಗೆಂದರೆ 15 ದಿವಸಗಳಿಗಿಂತ ಹೆಚ್ಚು ಪೇಮೆಂಟ್‌ಗೆ ಯಾವುದೇ ಬಿಲ್ ಪೆಂಡಿಂಗ್ ಇಲ್ಲ ಎಂದು ಹೇಳಿದ್ದಾರೆ. ಇವರು ಏನು ಅಧಿಕಾರಿಗಳಿಗೆ ಹೇಳಿದ್ದಾರೆ ಎಂದರೆ ನೀವು ಬಿಲ್ ಕಳುಹಿಸಬೇಡಿ, ನೀವು ಬಿಲ್ ಮಾಡಲು ಹೋಗಬೇಡಿ, ಕೆಲಸ ಆಗುವುದು ಆಗಿರಲಿ ಎಂದರೆ ಅವನು ಏನು ಮಾಡಬೇಕು.

ಶ್ರೀ ಸಿ. ಬೈರೇಗೌಡ:– ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ರಸ್ತೆ ಕೆಲಸ ಮಾಡಬೇಕು ಎಂದು ನಾವು ಹೇಳುತ್ತೇನೆ. ಆ ರಸ್ತೆ ಕೆಲಸ ಮಾಡಿದರೆ ಆ ಬಿಲ್ಲಿಗೆ ಪೇಮೆಂಟ್ ಮಾಡುವುದಿಲ್ಲ. ಬೆಳಗಾಂನಲ್ಲಿ ಇರಿಗೇಷನ್ ವರ್ಕ್ಸ್‌ಗೆ ಸಂಬಂಧಪಟ್ಟ 2 ಕೋಟಿ ರೂಪಾಯಿ ಬಿಲ್‌ಗಳು ಪೆಂಡಿಂಗ್ ಇವೆ. ಹೀಗಾದರೆ ಕೆಲಸ ಹೇಗೆ ಆಗುತ್ತದೆ. ಇವತ್ತು ಸರ್ಕಾರದಲ್ಲಿ ಯಾವುದೇ ಕೆಲಸ ನಡೆಯುತ್ತಿಲ್ಲ. ಪಿ.ಡಬ್ಲ್ಯೂ.ಡಿ. ವರ್ಕ್ಸ್ ಹಾಗೂ ಜಿಲ್ಲಾ ಪರಿಷತ್ ವರ್ಕ್ಸ್ ನಡೆಯುತ್ತಿದೆಯೆ, ಇಲ್ಲ. ನೀವು ಮಲೆನಾಡು ಮಂಡಳಿಯ ಅಧ್ಯಕ್ಷರಾಗಿದ್ದೀರಿ. ಇವತ್ತಿನ ದಿವಸ ಅಲ್ಲೂ ಕೂಡ ರೊಕ್ಕ ಬಿಡುಗಡೆ ಆಗಿಲ್ಲ.

ಈಗಾಗಲೇ 9 ತಿಂಗಳು ಮುಗಿದು ಹೋಯಿತು ಇನ್ನು ಉಳಿದ 3 ತಿಂಗಳಲ್ಲಿ 4-5 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಸಿ. ಬೈರೇಗೌಡ:- ಫೈನಾನ್ಷಿಯಲ್ ಇಯರ್, ಇನ್ನು ಎರಡುವರೆ ತಿಂಗಳಲ್ಲಿ ಮುಗಿದು ಹೋಗುತ್ತದೆ. ಎಲ್ಲಾ ಸರ್ಕಾರದ ಕೆಲಸಗಳು ಕೊನೆ ಮೂರು ತಿಂಗಳಲ್ಲಿ ಆಗಬೇಕಾಗಿದೆ. ಈಗ ಬಿಲ್ಲುಗಳಿಗೆ ಹಣ ಪಾವತಿ ಮಾಡಿಲ್ಲ ಎಂದರೆ ಯಾವ ಕಂಟ್ರಾಕ್ಟರೂ ಕೆಲಸ ಮಾಡುವುದಿಲ್ಲ. ಬಡ್ಜೆಟ್‌ನಲ್ಲಿ ಇಟ್ಟಿರತಕ್ಕ ಹಣ ಹಾಗೆಯೇ ಇರುತ್ತದೆ, ಎಷ್ಟರ ಮಟ್ಟಿಗೆ ಈ ವರ್ಷದಲ್ಲಿ ಅಭಿವೃದ್ಧಿ ಕೆಲಸಗಳು ಆಗಬೇಕಾಗಿತ್ತು ಆ ಮಟ್ಟದಲ್ಲಿ ಅಭಿವೃದ್ಧಿ ಕೆಲಸಗಳು ಯಾವುದೂ ಕೂಡ ಆಗುವುದಿಲ್ಲ. ಇವರು ಹದಿನೈದು ದಿವಸದಲ್ಲಿ ಯಾವ ಬಿಲ್ಲನ್ನು ಇಟ್ಟುಕೊಳ್ಳಬಾರದು ಎಂಬ ಮಾತನ್ನು ಹೇಳಿದ್ದಾರೆ. ಈ ತಿಂಗಳು ಕೆಲವು ದಿನಗಳ ಹಿಂದೆ ಕೋಲಾರದಲ್ಲಿ ಸಭೆ ನಡೆಯಿತು. ಆ ಸಭೆಯಲ್ಲಿ ಮಾನ್ಯ ವೆಂಕಟಪ್ಪನವರು ಕೂಡ ಹಾಜರಿದ್ದರು. ಆ ಸಭೆಯಲ್ಲಿ ಅಧಿಕಾರಿಗಳು ಯಾವು ಯಾವುದರ ಮೇಲೆ ಬ್ಯಾನ್ ಇದೆ ಎಂಬುದನ್ನು ಹೇಳಿದರು ಟ್ರಜರಿನಲ್ಲಿ ಪೇಮೆಂಟ್ ಮಾಡುತ್ತಿಲ್ಲ ಎಂದು ನಮ್ಮೆಲ್ಲರ ಎದುರಿಗೆ ಅಧಿಕಾರಿಗಳು ಹೇಳಿದರು ಇದರಿಂದ ಕೆಲಸ ಆಗುತ್ತಾ ಇಲ್ಲ. ಜಿಲ್ಲಾಧಿಕಾರಿಗಳು ಇದ್ದಂಥ ಆ ಸಭೆಯಲ್ಲಿಯೇ ಈ ರೀತಿ ಹೇಳಿದ್ದಾರೆ. ಆದ್ದರಿಂದ ಎಲ್ಲಾ ಅಭಿವೃದ್ಧಿ ಕೆಲಸಗಳು ನಿಂತು ಹೋಗಿವೆ. ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಹಾಗೂ ಅಭಿವೃದ್ಧಿ ಕೆಲಸಗಳು ನಡೆಯಲು ಬಡ್ಜೆಟ್‌ನಲ್ಲಿ ಇಟ್ಟಿರತಕ್ಕ ಹಣವನ್ನು ಬಿಡುಗಡೆ ಮಾಡಬೇಕು.

ಗಮನ ಸೆಳೆಯುವ ಸೂಚನೆಗಳು

ಮೈಸೂರಿನ ವಸ್ತು ಪ್ರದರ್ಶನಾಲಯದಲ್ಲಿ ಅಧಿಕಾರಿಗಳ ಬೇಜವಾಬ್ದಾರಿ.

ಶ್ರೀ ಜಿ. ರಾಜುಗೌಡ:- ಮೈಸೂರಿನಲ್ಲಿ ವಸ್ತು ಪ್ರದರ್ಶನಾಲಯದಲ್ಲಿ ಆನೆ ಮೇಲೆ ಸವಾರಿ ಮಾಡಿಸುವ ಮಾವುತನಿಂದ ಹಿಡಿದು ಅನೇಕ ಸಂಬಂಧಪಟ್ಟ ಅಧಿಕಾರಿಗಳ ಬೇಜವಾಬ್ದಾರಿ ವರ್ತನೆ ಬಗ್ಗೆ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ಬ್ಲೇಸಿಯಸ್ ಡಿಸೋಜ (ಕಾರ್ಮಿಕ ಸಚಿವರು):- ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಮಾಡಲಿಚ್ಚಿಸುತ್ತೇನೆ.

ದಿನಾಂಕ: 7-1-92ರಂದು ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಮಕ್ಕಳ ಮನರಂಜನೆಗಾಗಿ ಡಾಕ್ಟರ್ ಮಾಯಿಗೌಡ ಮತ್ತು ಮಕ್ಕಳು ಹಾಗೂ ಇತರರು ಜಾಯ್ ರೈಡ್ ಮಾಡುತ್ತಿರುವಾಗ ಆನೆಯ ಮೇಲಿನ ಜೀನು ವಾಲಿ ಮಕ್ಕಳನ್ನು ಇಳಿಸಿ ತಾವು ಇಳಿಯಬೇಕೆಂದಿರುವಷ್ಟರಲ್ಲಿ ಆನೆಯು ಡಾ||ಮಾಯಿಗೌಡರವರನ್ನು ಸೊಂಡಲಿನಿಂದ ಸುತ್ತಿ ಪಕ್ಕದಲ್ಲಿದ್ದ ಕಂಬಕ್ಕೆ ಬಡಿದು ಅಪಘಾತವುಂಟಾಯಿತೆಂದು, ಡಾ||ಮಾಯಿಗೌಡರು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವುದರಿಂದ ಅವರಿಗೆ ಚಿಕಿತ್ಸೆಗಾಗಿ ರೂ.50,000-00 ಖರ್ಚಾಗಿದೆ ಎಂದು ಮತ್ತು ಕುಟುಂಬದ ಭವಿಷ್ಯ ಮತ್ತು ಅವರ ಚಿಕಿತ್ಸೆಗಾಗಿ ರೂ. ಎರಡು ಲಕ್ಷ ಪರಿಹಾರ ಧನ ನೀಡಬೇಕೆಂದು ಡಾ||ಮಾಯಿಗೌಡರವರ ಪತ್ನಿ ಶ್ರೀಮತಿ ಸುನಂದಮ್ಮ ತಮ್ಮ ದಿನಾಂಕ: 16-11-92ರಲ್ಲಿ ಕೋರಿಕೊಂಡಿರುತ್ತಾರೆ.

ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳು ಇವರ ದಿನಾಂಕ: 10-12-92ರ ವರದಿ ಪ್ರಕಾರ ಈ ಘಟನೆಯು ಅರಣ್ಯ ಅಧಿಕಾರಿಗಳ ಬೇಜವಾಬ್ದಾರಿಯಿಂದ ನಡೆದಿರುವುದಿಲ್ಲವೆಂದು ಸ್ಪಷ್ಟಪಡಿಸಿರುತ್ತಾರೆ. ಜಾಯ್ ರೈಡಿಂಗ್ ಸ್ಥಳದಲ್ಲಿ ನೆರೆದಿದ್ದ ಜನರ ಅಕೃತ್ಯದಿಂದ ರೋಷಗೊಂಡ ಆನೆಯು ಮುಂದೆ ನುಗ್ಗಿದಾಗ ವಿದ್ಯುತ್ ಕಂಬಕ್ಕೆ ತಾಗಿ ಅದರಲ್ಲಿದ್ದ ಹ್ಯಾಲೋಜನ್ ಲ್ಯಾಂಪ್ ಒಡೆದಿದ್ದರಿಂದ, ಉಂಟಾದ ಶಬ್ದ ಮತ್ತು ಷಾಕ್‌ಗೆ ಹೆದರಿ ಆನೆಯು ಮುಗ್ಗರಿಸಿದ್ದರಿಂದ